ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 11 ॥Udp/1263/2015-17 || R.NO.50495/91 ॥ ತಾರೀಕು : 28–03–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಕುಂದಾಪುರದಲ್ಲಿ ವಲಸೆ ಕಾರ್ಮಿಕರ ಆರೋಗ್ಯ ಕಾಳಜಿ



ಅನ್ಯ ಜಿಲ್ಲೆಗಳಿಂದ ಈ ಭಾಗಕ್ಕೆ ದುಡಿಮೆಗೆ ಬರುವ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸುವ ಮೂಲಕ ಆರೋಗ್ಯ ಇಲಾಖೆ, ಸಮಾಜಸೇವಾ ಸಂಸ್ಥೆಗಳು ಮಾದರಿ ಕೆಲಸ ನಿರ್ವಹಿಸಿವೆ. ಉತ್ತರ ಕರ್ನಾಟಕದಿಂದ 600ಕ್ಕೂ ಹೆಚ್ಚುಮಂದಿ ಕಾರ್ಮಿಕರು ಇಲ್ಲಿ ನೆಲೆಗೊಂಡಿದ್ದು ಅವರಿಗೆ ಸೂಕ್ತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗುವುದು ಎಂದು ಕುಂದಾಪುರ ಸಹಾಯಕ ಕಮಿಷನರ್ ಶಿಲ್ಪಾನಾಗ್ ತಿಳಿಸಿದರು.

ಇಲ್ಲಿನ ಪಿಡಬ್ಲ್ಯೂಡಿ ಕಚೇರಿ ಆವರಣದಲ್ಲಿ ಉಡುಪಿ ಜಿ.ಪಂ, ಜಿಲ್ಲಾ ಆರೋಗ್ಯ ,ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ನಿಯಂತ್ರಣಾಧಿಕಾರಿ ಕಚೇರಿ ಉಡುಪಿ, ತಾಲೂಕು ಆರೋಗ್ಯಾಧಿಕಾರಿ ಕಚೇರಿ ಕುಂದಾಪುರ, ಪೋಲಿಸ್ ಇಲಾಖೆ, ಕುಂದಾಪುರ, ಜೆಸಿಐ ಕುಂದಾಪುರ ಸಿಟಿ , ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಆಶ್ರಯದಲ್ಲಿ ಹಮ್ಮಿಕೊಂಡ ವಲಸೆ ಕಾರ್ಮಿಕರಿಗೆ ರೋಗವಾಹಕ ಆಶ್ರಿತ ರೋಗಗಳ ಬಗ್ಗೆ ಅರಿವು ಮತ್ತು ಡಯಾಬಿಟಿಸ್ ತಪಾಸಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪುರಸಭೆ ಅಧ್ಯಕ್ಷೆ ವಸಂತಿ ಸಾರಂಗ ಮಾತನಾಡಿ, ಹೊಟ್ಟೆಪಾಡಿಗೋಸ್ಕರ ಈ ಭಾಗಕ್ಕೆ ಬರುವ ಕಾರ್ಮಿಕರ ಕಲ್ಯಾಣಕ್ಕಾಗಿ ಪುರಸಭೆ ಚಿಂತನೆ ನಡೆಸಿದೆ. ಸೇವಾ ಸಂಸ್ಥೆಗಳು ಹಮ್ಮಿಕೊಂಡ ಈ ಕಾರ್ಯಕ್ರಮ ಶ್ಲಾಘನೀಯ. ಪುರಸಭೆ ವತಿಯಿಂದ ಕಾರ್ಮಿಕರು ಉಳಿಯಲು ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ ಎಂದರು.

(6ನೇ ಪುಟಕ್ಕೆ)

## ಗುಡ್‌ನೈಟೂ ಇಲ್ಲ, ಸೊಳ್ಳೆ ಪರದೆಯೂ ಇಲ್ಲ



ಬೆಳಿಗ್ಗೆ 7 ಗಂಟೆ ಮುನ್ನವೇ ಇವರೆಲ್ಲಾ ಗಾಂಧಿ ಮೈದಾನದ ರಸ್ತೆ ಬದಿಯಲ್ಲಿ ಕಾಯುತ್ತಿರುತ್ತಾರೆ. ಯಾರು ಕೆಲಸಕ್ಕೆ ಕರೆಯುತ್ತಾರೋ ಅವರೊಂದಿಗೆ ಹೋಗುತ್ತಾರೆ. ಸಂಜೆಯಾದೊಡನೆ ಮತ್ತೆ ಕುಂದಾಪುರಕ್ಕೆ ಹಿಂದಿರುಗುತ್ತಾರೆ. ಗಾಂಧಿ ಮೈದಾನದ ಯಕ್ಷಗಾನ ಮೈದಾನ, ವಡೇರ ಹೋಬಳಿ ಪ್ರೌಢಶಾಲಾ ವಠಾರ, ನೆಹರೂ ಪೆವಿಲಿಯನ್ ಬಳಿ ಇವರ ಠಿಕಾಣಿ. ಕತ್ತಲಾದ ಕೂಡಲೇ ರೊಟ್ಟಿಯೋ, ಚಪಾತಿಯೋ ತಿಂದು ಶಾಲಾ ಜಗುಲಿ ಮೇಲೆ, ಮೈದಾನದಲ್ಲಿ ಬಟ್ಟೆ ಹಾಕಿ ಮಲಗುತ್ತಾರೆ.

ಸೊಳ್ಳೆ ಓಡಿಸಲು ಗುಡ್‌ನೈಟೂ ಇಲ್ಲ, ಸೊಳ್ಳೆ ಪರದೆಯೂ ಇಲ್ಲ, ಫ್ಯಾನೂ ಇಲ್ಲ. ಬೆಳಿಗ್ಗೆ 4 ಗಂಟೆಗೆ ಎಂದು ನಿತ್ಯ ಕ್ರಿಯೆಗಳಿಗಾಗಿ ಅಲ್ಲಿ ಇಲ್ಲಿ ಓಡಾಟ. ಮೊದಲು ಹೆಂಗಸರ ಸರದಿ, ನಂತರ ಗಂಡಸರು, ಸ್ನಾನ ಏನಿದ್ದರೂ ಕೆಲಸಕ್ಕೆ ಹೋದ ಕಡೆ, ಇಲ್ಲವಾದಲ್ಲಿ ಮೈದಾನದ ದಂಡೆಗಳಲ್ಲಿ.

ಸ್ವಚ್ಛ ಭಾರತ ಯೋಜನೆಯಡಿ ಮನೆ ಮನೆಗೆ ಶೌಚಾಲಯ ಸಾಧ್ಯ ಮಾಡಬಹುದಾದರೂ ಈ ನೂರಾರು ಮಂದಿ ಕಾರ್ಮಿಕರಿಗೆ ವ್ಯವಸ್ಥೆ ಮಾಡುವವರು ಯಾರು? ಹೆದರಿಕೆಯೋ, ನಾಯಕತ್ವದ ಕೊರತೆಯೋ? ಈ ಕಾರ್ಮಿಕರು ಕುಂದಾಪುರಕ್ಕೆ ಬರಲಾರಂಭಿಸಿ 10 ಕ್ಕೂ ಹೆಚ್ಚು ವರ್ಷಗಳಾದರೂ ಇವರು ಯಾವ ಬೇಡಿಕೆಯನ್ನೂ ಇಟ್ಟವರಲ್ಲ. ಆದರೆ ಇವರು ಮಾತ್ರ ಕುಂದಾಪುರಕ್ಕೆ ಅನಿವಾರ್ಯವೂ ಆಗಿದ್ದಾರೆ.

(6ನೇ ಪುಟಕ್ಕೆ)

ಶ್ರೀ ಬ್ರಹ್ಮ, ನಾಗ, ನಂದಿ, ಚಿಕ್ಕು ಪರಿವಾರ ದೈವಸ್ಥಾನ ಹೆಗ್ಗರಡಿ, ಅಚ್ಲಾಡಿ, ಬನ್ನಾಡಿ




ವಾರ್ಷಿಕ ಗೆಂಡೋತ್ಸವಕ್ಕೆ ಶುಭಹಾರೈಕೆ



ಹಾಲಾಡಿ ಜಯರಾಮ ಶೆಟ್ಟಿ
"ಅಕ್ಷತ"
ಕೋಡಿ ರಸ್ತೆ, ಹಂಗ್ಲೂರು
ಕುಂದಾಪುರ

ದಿನಾಂಕ 29–03–2017 ರಂದು ರಾತ್ರಿ ಜರುಗುವ ವಾರ್ಷಿಕ ಗೆಂಡೋತ್ಸವ ಹಾಗೂ ಮುಂಜಾನೆಯಿಂದ ಜರುಗಲಿರುವ ಢಕ್ಕೆಬಲಿ ತುಲಾಭಾರ ಸೇವೆಗಳು ಮತ್ತು ಸಕಲ ಧಾರ್ಮಿಕ ಸೇವೆಗಳು ಸಾಂಗವಾಗಿ ನೆರವೇರಲಿ
ಈ ವಾರ್ಷಿಕ ಮಹೋತ್ಸವದಲ್ಲಿ ಭಾಗವಹಿಸುವ ಎಲ್ಲ ಭಕ್ತಾಭಿಮಾನಿಗಳಿಗೆ ಸಕಲ ಶ್ರೇಯಸ್ಸು ಲಭಿಸಲಿ ಎಂದು ಪ್ರಾರ್ಥಿಸುತ್ತಾ ಶುಭ ಹಾರೈಸುವ